ಓ. ಎಸ್. ನಂ. 43 / 2017 ಡಿ ಡಬ್ಲ್ಯೂ - 1

ದಿನಾಂಕಃ 20.01.2023 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು - ವಾದಿ ಪರ ವಕೀಲರಿಂದ</u>

ನನ್ನನ್ನು ರಿಸೀವರ್ ಹಾಗೂ ವ್ಯಾಜ್ಯ ನಿರ್ವಹಣಾಧಿಕಾರಿಯಾಗಿ ಮಾಡಿರುವುದಕ್ಕೆ ಸಂಬಂಧಿಸಿದಂತೆ ತೋರಿಸಲು ನಿಡಿ-1 ಮತ್ತು ನಿಡಿ-2 ನ್ನು ಹಾಜರು ಪಡಿಸಿದ್ದೇನೆ. ನಿಡಿ-1 ಮತ್ತು ನಿಡಿ-2 ರಲ್ಲಿ ದರ್ಗಾ ಸ್ಥಳ ಎಂದರೆ ಏನು ಅದರ ಅಳತೆ, ಚೆಕ್ಕುಬಂದಿ, ಅದರ ನಕ್ಷೆಯ ಬಗ್ಗೆ ಏನೂ ತಿಳಿಸಿರುವುದಿಲ್ಲ ಎಂದರೆ ಸರಿ. ನಾನು ವಡಕೆಹಳ್ಳದ ದರ್ಗಾಕ್ಕೆ ಹೋಗಿ ಬೀಗ ಹಾಕಿರುತ್ತೇನೆ. ನಿಡಿ-1 ಮತ್ತು ನಿಡಿ-2 ರಲ್ಲಿ ವಡಕೆಹಳ್ಳ ದರ್ಗಾ ಎಂದು ಇರುವುದನ್ನು ನೋಡಿ ನಾನು ಆ ಸ್ಥಳವನ್ನು ಬೀಗ ಹಾಕಿರುತ್ತೇನೆಂದರೆ ಸರಿ. ನನಗೆ ದರ್ಗಾ ಎಂದರೆ ಏನು ಎಂದು ಗೊತ್ತಿರುತ್ತದೆ. ದರ್ಗಾ ಎಂದರೆ ಸಮಾಧಿ ಇದ್ದು ಅದರ ಸುತ್ತಲೂ ಒಂದಷ್ಟು ಜಾಗ ಇರುತ್ತದೆ ಎಂದರೆ ಸರಿ. ನಿಡಿ-1 ಮತ್ತು ನಿಡಿ-2 ರ ಪ್ರಕಾರ ನಾನು ದರ್ಗಾ ಸ್ಥಳವನ್ನು ಮಾತ್ರ ರಿಸೀವರ್ ಆಗಿ ನನ್ನ ಕಂಟ್ರೋಲಿಗೆ ತೆಗೆದುಕೊಳ್ಳಬೇಕಾಗಿರುತ್ತದೆ ಎಂದರೆ ಸರಿ. ದರ್ಗಾ ಸ್ಥಳವನ್ನು ಬಿಟ್ಟು ಅಲ್ಲಿರುವಂತಹ ಬೇರೆ ಸ್ಥಳಗಳಿಗೆ ನನ್ನನ್ನು ರಿಸೀವರ್ ಆಗಿ ನೇಮಕ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ದರ್ಗಾದ ಸ್ಥಳವನ್ನು ಸೇರಿ ಅಲ್ಲಿರುವಂತಹ ಮಸೀದಿ, ಊಟದ ಜಾಗ, ಅಡಿಗೆ ಮನೆ, ಸಮಾಧಿ ಇತ್ಯಾದಿ ಸೇರಿ ಒಟ್ಟು 8 ಎಕರೆ ಜಾಗವನ್ನು ನಿಯಂತ್ರಣಕ್ಕೆ ಪಡೆದುಕೊಂಡಿದ್ದೇನೆಂದರೆ ಸರಿ. ನಾನು ಒಂದು ಬಣದ ಕಡೆ ಸೇರಿಕೊಂಡು ನನ್ನ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡು ದರ್ಗಾವನ್ನು ಸೇರಿ ಹೆಚ್ಚು ಜಾಗವನ್ನು ನಿಯಂತ್ರಣಕ್ಕೆ ಪಡೆದುಕೊಂಡಿದ್ದೇನೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ದರ್ಗಾದ ಗೇಟಿಗೆ ಮಾತ್ರ ಬೀಗ ಹಾಕಿದ್ದು ಉಳಿದ ಜಾಗಕ್ಕೆ ಬೀಗ ಹಾಕಿರುವುದಿಲ್ಲವೆಂದು ನುಡಿಯುತ್ತಾರೆ.

ನಾನು ದರ್ಗಾ ಸ್ಥಳಕ್ಕೆ ಮಾತ್ರ ರಿಸೀವರ್ ಆಗಿದ್ದು ಉಳಿದ ಜಾಗಕ್ಕೆ ಸಂಬಂಧಪಟ್ಟಂತೆ ನಾನು ರಿಸೀವರ್ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ದರ್ಗಾ ಸ್ಥಳ ಮತ್ತು ಆ ಸರ್ವೆ ನಂಬರಿನಲ್ಲಿ ಬರುವಂತಹ ಪೂರ್ತಿ ಜಾಗಕ್ಕೆ ರಿಸೀವರ್ ಆಗಿದ್ದೇನೆಂದು ನುಡಿಯುತ್ತಾರೆ. ನಿಡಿ-1 ಮತ್ತು ನಿಡಿ-2 ರಲ್ಲಿ ನನಗೆ ದರ್ಗಾ ಸ್ಥಳಕ್ಕೆ ಮಾತ್ರ ರಿಸೀವರ್ ಆಗಿರುವ ಬಗ್ಗೆ ಆದೇಶವಿದ್ದು ಪೂರ್ತಿ 8 ಎಕರೆ ಜಾಗಕ್ಕೆ ರಿಸೀವರ್ ಆಗುವಂತೆ ಆದೇಶ ಇರುವುದಿಲ್ಲ ಎಂದರೆ ಸರಿ. ನನ್ನನ್ನು ನಿಡಿ-1 ಮತ್ತು ನಿಡಿ-2 ರ ಪ್ರಕಾರ ದರ್ಗಾ ಸ್ಥಳಕ್ಕೆ ಮಾತ್ರ ರಿಸೀವರ್ ಮಾಡಿರುತ್ತಾರೆಂದರೆ ಸರಿ. ನಾನು ನಿಡಿ-4 ಮತ್ತು ನಿಡಿ-5 ರ ಮಹಜರಿನಲ್ಲಿ ದರ್ಗಾದ ಸ್ಥಳ ಮತ್ತು ಎಲ್ಲಾ ಜಾಗಕ್ಕೂ ಬೀಗ ಹಾಕಿರುವುದಾಗಿ ತೋರಿಸಿದ್ದೇನೆಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಮೊದಲು ಎಲ್ಲಾ ಜಾಗಕ್ಕೂ ಬೀಗ ಹಾಕಿದ್ದು ನಂತರ ತಹಶೀಲ್ದಾರರು ಮೌಖಿಕವಾಗಿ ಹೇಳಿದ ನಂತರ ದರ್ಗಾದ ಗೇಟಿಗೆ ಮಾತ್ರ ಬೀಗ ಹಾಕಿದ್ದೆನು ಎಂದು ನುಡಿಯುತ್ತಾರೆ.

ನಾನು ಒಂದು ವರ್ಗದ ಕಡೆ ಶಾಮೀಲಾಗಿ ನನಗೆ ಸಂಬಂಧಪಡದ ದರ್ಗಾದ ಸುತ್ತಮುತ್ತಲಿನ ಸ್ಥಳಕ್ಕೂ ಬೀಗ ಹಾಕಿರುವ ಬಗ್ಗೆ ಮಹಜರು ಮಾಡಿ ಅದು ನನ್ನ ಸುಪರ್ದಿಯಲ್ಲಿದೆ ಎಂದು ತಿಳಿಸಿ ನಂತರ ಈಗ ನ್ಯಾಯಾಲಯದ ಮುಂದೆ ಮೌಖಿಕವಾಗಿ ತಹಶೀಲ್ದಾರ್ ರವರು ದರ್ಗಾದ ಮುಖ್ಯ ದ್ವಾರದ ಬೀಗ ತೆಗೆಯಿರಿ ಎಂದು ಹೇಳಿದ ಕಾರಣ ತೆಗೆದಿದ್ದೇನೆಂದು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ನಿಡಿ–4 ಮತ್ತು ನಿಡಿ–5 ರಲ್ಲಿ ದರ್ಗಾ ಮತ್ತು ಎಲ್ಲಾ ಜಾಗವನ್ನು ಸುಪರ್ದಿಗೆ ತೆಗೆದುಕೊಂಡಿದ್ದು ನಿಮ್ಮ ಮೌಖಿಕ ಆದೇಶದ ಮೇರೆಗೆ ಅದನ್ನು ತಿದ್ದು ಪಡಿ ಮಾಡಲು ಅನುಮತಿ ಕೊಡಿ ಎಂದು ತಹಶೀಲ್ದಾರ್ ರವರಿಗೆ ಮನವಿ ಪತ್ರ ಸಲ್ಲಿಸಿರುವುದಿಲ್ಲ. ನಾನು ಒಂದು ಕಡೆ ಸಪೋರ್ಟು ಮಾಡುವ ಸಲುವಾಗಿ ಇಲ್ಲಿಯವರೆಗೂ ಮಹಜರಿಗೆ ತಿದ್ದು ಪಡಿ ಮಾಡಲು ತಹಶೀಲ್ದಾರ್ ರವರಿಗೆ ಮನವಿ ಪತ್ರ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಒಂದು ಬೇಜವಾಬ್ದಾರಿತನದಿಂದ ದರ್ಗಾದ ಸುತ್ತ ಮುತ್ತ ಇರುವ ಮಸೀದಿಯಲ್ಲಿ ನಮಾಜ್ ಮಾಡಲು ಹಾಗೂ ಹಿರಿಕರು ಸತ್ತರೆ ಅವರ ಸಮಾಧಿ ಮಾಡಲು ಆಗುತ್ತಿಲ್ಲ ಎಂದರೆ ಸರಿಯಲ್ಲ.

ನಾನು ದರ್ಗಾದ ಮುಖ್ಯ ದ್ವಾರಕ್ಕೆ ಇಂದಿನವರೆಗೂ ಬೀಗ ಹಾಕಿದ್ದು ಈಗ ನ್ಯಾಯಾಲಯದ ಮುಂದೆ ಬೀಗ ಹಾಕಿಲ್ಲವೆಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಒಂದು ಕಡೆ ಸಪೋರ್ಟು ಮಾಡುತ್ತಾ ಇನ್ನೊಂದು ಕಡೆಯವರಿಗೆ ತೊಂದರೆ ಮಾಡಲು ದರ್ಗಾದ ಆವರಣದ ಮುಖ್ಯ ದ್ವಾರಕ್ಕೆ ಬೀಗ ಹಾಕಿದ್ದೇನೆಂದರೆ ಸರಿಯಲ್ಲ. ಇದುವರೆಗೂ ಸಹ ದರ್ಗಾದ ಮುಖ್ಯ ದ್ವಾರಕ್ಕೆ ಬೀಗ ಹಾಕಿದ್ದು ಅಕ್ರಮವಾಗಿ ಪೋಲಿಸ್ ಸುಪರ್ದಿಯಲ್ಲಿಟ್ಟಿದ್ದೇವೆಂದರೆ ಸರಿಯಲ್ಲ. ಈ ದಾವೆಯಲ್ಲಿ ನಾನು ನನ್ನ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡು ಈಗ ಅದನ್ನು ಮುಚ್ಚಿ ಹಾಕಿಕೊಳ್ಳಲು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಆನಂದ ಎಂ.)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.